




# ಡಿಜಿಲಾಕರ್

## ಬಳಸಿ, ದಂಡ ತಪ್ಪಿಸಿ

ದಾಖಲೆ ಹಾಗೂ ಪ್ರಮಾಣ ಪತ್ರಗಳನ್ನು ವಿದ್ಯುನ್ಮಾನ ಅಂದರೆ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿ ಮೊಬೈಲ್‌ನಲ್ಲಿ ಇಟ್ಟುಕೊಂಡಿದ್ದರೆ, ಅಗತ್ಯವಿದ್ದಾಗ ಬಳಸಲು ಸುಲಭ ಆಗುತ್ತದೆ.

■ **ಶಶಿಕುಮಾರ್ ಸಿ.**

ಕಲಬುರ್ಗಿಯಿಂದ ಸ್ನೇಹಿತನೊಬ್ಬ ಈಚೆಗೆ ಬೆಂಗಳೂರಿಗೆ ಬಂದಿದ್ದ. ಹಾಗೆ ಬಂದವನೇ ಸುತ್ತಾಡಲೆಂದು ಬೈಕ್ ಹತ್ತಿ ಹೋಗಿದ್ದ. ದಾರಿ ಮಧ್ಯ ಸಂಚಾರಿ ಪೊಲೀಸರು ಆತನನ್ನು ಅಡ್ಡಗಟ್ಟಿ ದಾಖಲಾತಿಗಳನ್ನು ಕೇಳಿದ್ದಾರೆ. ಬೈಕ್‌ನ ಆರ್‌ಸಿ ಬುಕ್, ಡಿಎಲ್, ಇನ್‌ಶ್ಯೂರೆನ್ಸ್, ಎಮಿಷನ್ ಟೆಸ್ಟ್ ಸರ್ಟಿಫಿಕೇಟ್ ಸೇರಿದಂತೆ ಅಗತ್ಯ ದಾಖಲಾತಿಗಳಿದ್ದರೂ ಅವುಗಳನ್ನೆಲ್ಲ ದೂರದ ಕಲಬುರ್ಗಿಯಲ್ಲಿ ಬಿಟ್ಟು ಬಂದಿದ್ದ. ಇದೇ ಕಾರಣಕ್ಕೆ ದಂಡ ಪಾವತಿಸಿ ಜೇಬು ಖಾಲಿಮಾಡಿಕೊಳ್ಳುವಂತಾಯಿತು.

ಇಂತಹದ್ದೇ ಸಮಸ್ಯೆಯನ್ನು ನಿತ್ಯವೂ ನೂರಾರು ವಾಹನ ಸವಾರರು ಎದುರಿಸುತ್ತಿದ್ದಾರೆ. ನಾನಾ ಕಾರಣಗಳಿಂದ ದಾಖಲಾತಿಗಳನ್ನು ಜೊತೆಗೆ ಕೊಂಡೊಯ್ಯದೆ ದಂಡ ಪಾವತಿಸುತ್ತಿದ್ದಾರೆ. ಇಂತಹವರ ಅನುಕೂಲಕ್ಕೆಂದೇ ವರ್ಷಗಳ ಹಿಂದೆಯೇ 'ಡಿಜಿ ಲಾಕರ್' (digilocker) ಅಸ್ತಿತ್ವಕ್ಕೆ ಬಂದಿದ್ದು, ಅದರ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಂತಿಲ್ಲ. ಆ ಕುರಿತ ಹೆಚ್ಚಿನ ಮಾಹಿತಿ ಇಲ್ಲಿದೆ.

**ಏನಿದು ಡಿಜಿ ಲಾಕರ್?**

'ಡಿಜಿ ಲಾಕರ್' ಎಂಬುದು ಕಾಗದ ರಹಿತ ಆಡಳಿತದ ಕನಸಿನ ಗುರಿಯೊಂದಿಗೆ ರೂಪಿತವಾದ ತಂತ್ರಜ್ಞಾನ ವ್ಯವಸ್ಥೆ. ವೆಬ್‌ಸೈಟ್ ಹಾಗೂ ಆ್ಯಪ್ ರೂಪದಲ್ಲಿ ಇದು ಲಭ್ಯ. ಸಾರ್ವಜನಿಕರು ತಮ್ಮ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ವಿದ್ಯುನ್ಮಾನ ಅಂದರೆ ಡಿಜಿಟಲ್ (ಸಾಫ್ಟ್‌ಕಾಪಿ) ರೂಪದಲ್ಲಿ ಸಂಗ್ರಹಿಸಿಡಬಹುದು. ಅಗತ್ಯವಿದ್ದ ಕಡೆಗಳಲ್ಲಿ ಈ ವ್ಯವಸ್ಥೆ ಮೂಲಕವೇ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಬಳಸಿ, ಹಾರ್ಡ್‌ಕಾಪಿ ಬಳಕೆಯನ್ನು ತಡೆಗಟ್ಟುವುದು ಇದರ ಮೂಲಕ ಉದ್ದೇಶ.

**ಬಳಕೆ ಹೇಗೆ?**

ಆಧಾರ್‌ಕಾರ್ಡ್ ಅಥವಾ ಮೊಬೈಲ್ ನಂಬರ್ ಹೊಂದಿದ ದೇಶದ ಪ್ರತಿಯೊಬ್ಬ ಪ್ರಜೆಯೂ 'ಡಿಜಿ ಲಾಕರ್' ಖಾತೆ ತೆರೆಯಬಹುದು. ಅದಕ್ಕಾಗಿ, **digilocker.gov.in** ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ ಗೂಗಲ್ ಪ್ಲೇಸ್ಟೋರ್‌ನಲ್ಲಿ ಡಿಜಿ ಲಾಕರ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಬಳಿಕ ನಿಗದಿತ ಸ್ಥಳದಲ್ಲಿ ನಿಮ್ಮ ಮೊಬೈಲ್ ಸಂಖ್ಯೆ ಅಥವಾ ಆಧಾರ್ ಕಾರ್ಡ್ ಸಂಖ್ಯೆಯನ್ನು ನಮೂದಿಸಿ ಸಬ್ಮಿಟ್ ಆಯ್ಕೆ ಕ್ಲಿಕ್ಕಿಸಿದರೆ ನಿಮ್ಮ ಮೊಬೈಲ್ ನಂಬರ್‌ಗೆ ಕೂಡಲೇ **OTP** (ಒನ್ ಟೈಮ್ ಪಾಸ್ ವರ್ಡ್) ಮೆಸೇಜ್ ಬರುತ್ತದೆ. ಅದನ್ನು ನಮೂದಿಸಿ ಮತ್ತೊಮ್ಮೆ ಸಬ್ಮಿಟ್ ಆಯ್ಕೆ ಕ್ಲಿಕ್ಕಿಸಿ. ನಂತರ ಬಳಕೆದಾರರ ಹೆಸರು ಮತ್ತು ಪಾಸ್‌ವರ್ಡ್ ಅನ್ನು ಸೆಟ್ ಮಾಡಿಕೊಳ್ಳಬೇಕು.

ಬಳಿಕ ಅಗತ್ಯದ ದಾಖಲೆಗಳು ಹಾಗೂ ಪ್ರಮಾಣ ಪತ್ರಗಳನ್ನು ಹುಡುಕಿ ಡೌನ್‌ಲೋಡ್ ಮಾಡಿಕೊಳ್ಳಿ. ಡಿಜಿ ಲಾಕರ್‌ನಲ್ಲಿ ನೋಂದಣಿ ಮಾಡಿರುವ ಸರ್ಕಾರಿ ಸಂಸ್ಥೆಗಳು ನೀಡಿರುವ ದಾಖಲೆಗಳನ್ನು ನೇರವಾಗಿ ಸಾರ್ವಜನಿಕರು ತಮ್ಮ ಖಾತೆಗಿಳಿಸಬಹುದು. ಡೌನ್‌ಲೋಡ್ ಆದ ದಾಖಲೆಗಳು ಇಶ್ಯೂಡ್ ಡಾಕ್ಯುಮೆಂಟ್ಸ್ (Issued Documents) ಎಂಬ ಆಯ್ಕೆ ಕ್ಲಿಕ್ಕಿಸಿದರೆ ಲಭ್ಯವಾಗುತ್ತವೆ.

ಉದಾಹರಣೆಗೆ ಡಿಎಲ್ ಸರ್ಟಿಫಿಕೇಟ್ ಬೇಕಿದ್ದರೆ ನಿಮ್ಮ ಡಿಎಲ್ ಸಂಖ್ಯೆ ಅಥವಾ ಹೆಸರಿನ ಜೊತೆಗೆ ಅಗತ್ಯವಾದ ಮಾಹಿತಿಯನ್ನು ನಮೂದಿಸಿದರೆ ಅದರ ವಿದ್ಯುನ್ಮಾನ (ಡಿಜಿಟಲ್/ಸಾಫ್ಟ್‌ಕಾಪಿ) ರೂಪದ ಸರ್ಟಿಫಿಕೇಟ್ ಲಭ್ಯವಾಗುತ್ತದೆ. ಡೌನ್‌ಲೋಡ್ ಮಾಡಿದರೆ 'ಇಶ್ಯೂಡ್ ಡಾಕ್ಯುಮೆಂಟ್ಸ್' ವಿಭಾಗದಡಿ ಅದು ಸೇವ್ ಆಗಿರುತ್ತದೆ. ಇದೇ ರೀತಿ ಬೇರೆ ಬೇರೆಯ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ವೈಯಕ್ತಿಕ ದಾಖಲಾತಿಗಳನ್ನೂ ಸಹ ಇದರಲ್ಲಿ ಅಪ್‌ಲೋಡ್ ಮಾಡಿಟ್ಟುಕೊಳ್ಳಬಹುದು. ಅದಕ್ಕಾಗಿ, ಅಪ್‌ಲೋಡೆಡ್ ಡಾಕ್ಯುಮೆಂಟ್ಸ್ (Uploaded Documents) ಆಯ್ಕೆ ಕ್ಲಿಕ್ ಮಾಡಿದರೆ ಅಲ್ಲಿ 'ಡಾಕ್ಯುಮೆಂಟ್ಸ್' ಮತ್ತು 'ಮೈ ಸರ್ಟಿಫಿಕೇಟ್' ಎಂಬ ಎರಡು ಪ್ರತ್ಯೇಕ ಫೋಲ್ಡರ್‌ಗಳು ಕಾಣುತ್ತವೆ. ಅವುಗಳಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು. ಅವುಗಳ ಹೊರತಾಗಿ ಬೇರೆ ಫೋಲ್ಡರ್ ಅನ್ನೂ ಸೃಷ್ಟಿಸಿಕೊಳ್ಳಬಹುದು. ಡಾಕ್ಯುಮೆಂಟ್‌ಗಳನ್ನು ಅಪ್‌ಲೋಡ್ ಮಾಡುವ ವಿಧಾನವು ವೆಬ್‌ಸೈಟ್ ಹಾಗೂ ಆ್ಯಪ್‌ನಲ್ಲಿ ಒಂದೇ ರೀತಿ ಇರುತ್ತದೆ.

**ಯಾರಿಗೆ ಅನುಕೂಲ?**

ಮೂಲ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಎಲ್ಲ ಕಡೆಯೂ ಕೊಂಡೊಯ್ಯಲು ಇಷ್ಟಪಡದವರು, ಅವುಗಳಿಂದ ಕಿರಿಕಿರಿ ಅನುಭವಿಸುವವರು ಇದರ ಲಾಭ ಪಡೆಯಬಹುದು. ಕೇಂದ್ರ ಸರ್ಕಾರವು ಡಿಜಿಟಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ಬಹುತೇಕ ಕಡೆಗಳಲ್ಲಿ ದಾಖಲೆ–ಸರ್ಟಿಫಿಕೇಟ್‌ಗಳ ಸಾಫ್ಟ್‌ಕಾಪಿಯನ್ನು ಪರಿಗಣಿಸಬೇಕೆಂಬ ಆದೇಶವಿದೆ. ಹೀಗಾಗಿ, ದೇಶದ ಪ್ರತಿಯೊಬ್ಬರಿಗೂ ಇದರ ಲಾಭವಾಗುತ್ತದೆ. ವಿಶೇಷವಾಗಿ ವಾಹನ ಸವಾರರಿಗೆ ಹೆಚ್ಚು ಅನುಕೂಲ.

**ಏನೆಲ್ಲಾ ಇಡಬಹುದು?**

ವಾಹನ ಚಾಲನೆ ಪರವಾನಗಿ ಪತ್ರ (ಡಿಎಲ್), ವಾಹನ ನೋಂದಣಿ ಪತ್ರ (ಆರ್‌ಸಿ), ಪಾನ್‌ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್, ಪಾಸ್‌ಪೋರ್ಟ್, ಎಸ್ಸೆಸ್ಸೆಲ್ಸಿ ಸರ್ಟಿಫಿಕೇಟ್, ಡಿಗ್ರಿ ಸರ್ಟಿಫಿಕೇಟ್ ಮುಂತಾದವುಗಳನ್ನು ಇಡಬಹುದು. ಇದರಲ್ಲಿನ ದಾಖಲೆ ಪತ್ರಗಳು ಸುರಕ್ಷಿತ. ■